# ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು)ಅಧಿನಿಯಮ, 1961

(ಕರ್ನಾಟಕ ರಾಜ್ಯಪತ್ರ ಗುರುವಾರ ಫೆಬ್ರುವರಿ 22, 2007ರ ಭಾಗ- , 153 ರಿಂದ 161ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ)

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು :**


1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು
3. ಹಡಗಿನ ಮೂಲಕ ಸಾಗಿಸಿದ ಸರಕುಗಳ ಮೇಲೆ ಫೀಜುಗಳನ್ನು ವಿಧಿಸುವುದು, ಇತ್ಯಾದಿ
4. ಈ ಅಧಿನಿಯಮದ ಮೇರೆಗಿನ ಅಧಿಕಲಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸಬೇಕಾಗಿರುವ ಮತ್ತು ನೆರವೇರಿಸಬೇಕಾಗಿರುವ ವ್ಯಕ್ತಿಗಳು
5. ಫಜಿಗಳನ್ನು ಸಂದಾಯ ಮಾಡುವವರೆಗೆ ಸರಕುಗಳನ್ನು ತಡೆಹಿಡಿದಿಡುವುದು
6. ಹಡಗಿನ ಇಳಿದಾಣ, ಇಳಿಕಟ್ಟೆ, ಮುಂತಾದವುಗಳಿಗೆ ಹಾನಿ ಉಂಟು ಮಾಡಿದಾಗ ಒಡೆಯನ ಹೊಣೆಗಾರಿಕೆ
7. ಈ ಅಧಿನಿಯಮದ ಮೇರೆಗೆ ಸ್ವೀಕರಿಸಿದ ಫೀಜುಗಳ ವೆಚ್ಚ
8. ಬಂಧರುಗಳನ್ನು ಫೀಜುಗಳ ನಿಧಿಯ ಲೆಕ್ಕ
9. ಬಂದರುಗಳನ್ನು ಗುಂಪುಗೂಡಿಸುವುದು
10. ನಿಯಮಗಳು
11. ಕಂಪನಿಗಳು, ಇತ್ಯಾದಿಗಳಿಂದ ಅಪರಾಧಗಳು
12. ಅಧಿನಿಯಮದ ಪರಿಣಾಮ
13. ಅಧಿಕಾರಿಗಳು, ಮುಂತಾದವರ ರಕ್ಷಣೆ
14. ನಿರಸನ ಮತ್ತು ಉಳಿಸುವಿಕೆಗಳು


## ಉದ್ದೇಶ ಮತ್ತು ಕಾರಣಗಳ ಹೇಳಿಕೆ

**I**

**1961 ರ ಅಧಿನಿಯಮ 20.-** ರಾಜ್ಯದ ಹಲವು ಚಿಕ್ಕ ಬಂದರುಗಳಲ್ಲಿ ಸರಕುಗಳನ್ನು ಹಡಗಿನಿಂದ ಇಳಿಸುವುದು, ಅಲುಗಳನ್ನು ಹಡಗಿಗೆ ತುಂಬುವುದು ಮತ್ತು ಅವುಗಳ ದಾಸ್ತಾನು ಮಾಡುವುದು ಹಾಗ ಪ್ರಯಾಣಿಕರು ಹಡಗನ್ನು ಹತ್ತುವುದು ಮತ್ತು ಅದರಿಂದ ಇಳಿಯುವುದು ಇವುಗಳ ಮೇಲೆ ಫೀಜುಗಳನ್ನು ವಿಧಿಸುವುದಕ್ಕೆ ಸಂಬಂಧಿಸಿದಂತೆ ಈಗಿರುವ ಕಾನೂನು

ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಭಿನ್ನಭಿನ್ನವಾಗಿವೆ. ಬಂದರು ರಾಜಸ್ವಗಳ ಮಸೂಲಿ ಮತ್ತು ಜಮೆಗಾಗಿ ಪ್ರಚಲಿತ ಕಾರ್ಯವಿಧಾನದ ಸಂಬಂಧದಲ್ಲಿ ಮತ್ತು ವಸೂಲಿಯಾದ ಹಣದ ಬಳಕೆಯ ಸಂಬಂಧದಲ್ಲಿ ನಿಧಿಯೊಂದನ್ನು ಸೃಜಿಸಲು ಉದ್ದೇಶಿಸಲಾಗಿದ್ದು, ವಿವಿಧ ವಿಧಿಸುವಿಕೆಗಳಿಂದ ಅದಕ್ಕೆ ಬರುವ ಎಲ್ಲ ಸ್ವೀಕೃತಿಗಳನ್ನ ಜಮೆ ಮಾಡಲಾಗುವುದು ಮತ್ತು ಅದರಲ್ಲಿ ಭಾರದ ಬಂಧರುಗಳ ಅಧಿನಿಯಮದ ಮೇರೆಗೆ ವಿಧಿಸಲಾಗುವ ಶುಲ್ಕಗಳಿಂದ ವಸೂಲಿಯಾಗುವ ಮೊತ್ತವನ್ನು ಸಹ ವಿಲೀನಗೊಳಿಸಲಾಗುವುದು.

(ಎಲ್‌ಎಡಬ್ಲ್ಯೂ 103 ಎಲ್‌ಜಿಎನ್ 58 ರಿಂದ ಪಡೆಯಲಾಗಿದೆ.)

**II**

**1980 ತಿದ್ದುಪಡಿ ಮಾಡುವ ಅಧಿನಿಯಮ 8.-** ಮಂಗಳೂರು ಪೋರ್ಟ್ ಟ್ರಸ್ಟ ಅಧಿನಿಯಮ, 1953ರ ಮೇರೆಗೆ ಮಂಗಳೂರು ಚಿಕ್ಕ ಬಂದರಿನ ವಿನಿಯಮ, ನಿರ್ಮಲೀಕರಣ ಮತ್ತು ಸುಧಾರಣೆಯ ಕಾರ್ಯವನ್ನು ಮಂಗಳೂರು ಪೋರ್ಟ್ ಟ್ರಸ್ಟ ಮಂಡಳಿಯಲ್ಲಿ ನಿಹಿತಗೊಳಿಸಲಾಗಿತ್ತು.

ನವ ಮಂಗಳೂರು ಬಂದರು ಕಾರ್ಯಾರಂಭ ಮಾಡಿದಂದಿನಿಂದ ಯಾವುದೇ ಸ್ಟೀಮರು ಹಳೆ ಬಂದರಿಗೆ ಬರುತ್ತಿಲ್ಲ ಮತ್ತು ಕರಾವಳಿಯ ಹಡಗುಸರಕುಗಳನ್ನು,, ಎಂದರೆ, ಹೆಂಚುಗಳು, ಮೀನು, ಉಪ್ಪು, ಇತ್ಯಾದಿಗಳನ್ನು ಸಾಗಿಸುವ ಸಣ್ಣ ಹಾಯಿ ಹಡಗುಗಳು ಮಾತ್ರ ಒಂದರಿಗೆ ಬರುತ್ತಿವೆ. ಸ್ಟೀಮರುಗಳು ಉತ್ತಮ ಸೌಲಭ್ಯಗಳಿರುವ ನವಮರಿಗಳೂರು ಬಂದರಿನ ಕಡೆಗೆ ಹೋಗುತ್ತಿವೆ. ಹೀಗಾಗಿ, ಹಳೇ ಬಂದರಿನ ಆದಾಯವು ತೀವ್ರವಾಗಿ ಕಡಿಮೆಯಾಗುತ್ತಿದ್ದು, ಈ ಬಂದರುಈಗ ಹಣಕಾಸು ಬಿಕ್ಕಟ್ಟನ್ನು ಎದುರಿಸುತ್ತಿದೆ. ಬರುತ್ತಿರುವ ಅತ್ಯಲ್ಪ ಆದಾಯ ಹಾಗೂ ಈಗಿರುವ ವ್ಯವಸ್ಥೆಯೊಂದಿಗೆ ಹಳೆ ಬಂದರನ್ನು ನಿರ್ವಹಿಸುವುದು ಅಸಾಧ್ಯ.

ಹಳೇ ಬಂದರನ್ನು ರಾಜ್ಯ ಸರ್ಕಾರವು ಬಂದರುಗಳ ನಿರ್ದೇಶನಾಲಯದ ಅಡಿಯಲ್ಲಿ ವಹಿಸಿಕೊಂಡರೆ, ಒಳನಾಡು ಜಲಸಾರಿಗೆ ಅಭಿವೃದ್ಧಿ ಕಾಮಗಾರಿಗಳನ್ನು ರಾಜ್ಯ ಸರ್ಕಾರವು ಕಾರ್ಯಗತಗೊಳಿಸಬಹುದು. ಬಂದರುಗಳ ಇಲಾಖೆಯು ಚಿಕ್ಕ ಬಂದರುಗಳ ಆಡಳಿತಕ್ಕಾಗಿ ಮತ್ತು ನಿರ್ವಹಣೆಗಾಗಿ ತನ್ನದೇ ಆದ ಸಂಘಟನೆಯನ್ನು ಹೊಂದಿರುವುದರಿಂದ ಅದು ಹಳೇ ಮಂಗಳೂರು ಬಂದರನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಬಹುದು ಮತ್ತು ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ಇತರೆ ಎಲ್ಲಾ ಚಿಕ್ಕ ಬಂದರುಗಳ ಆಡಳಿತವನ್ನು ನಡೆಸುತ್ತಿರುವಾಗ ಮತ್ತು ನಿರ್ವಹಿಸುತ್ತಿರುವಾಗ ಮಂಗಳೂರಿಗೆ ಒಂದು ಪ್ರತ್ಯೇಕ ಟ್ರಸ್ಟ ಇರುವುದು ಅಗತ್ಯವೆನಿಸದು, ಹಳೇ ಬಂದರನ್ನು ಹೆಂಚು, ಉಪ್ಪು, ಇತ್ಯಾದಿಗಳ ಕರಾವಳಿ ವ್ಯಾಪಾರವನ್ನು ನಿರ್ವಹಿಸುವ ಅದರ ವಾಣಿಜ್ಯ ಚಟುವಟಿಕೆಯ ಜೊತೆಗೆ ಒಂದು ಮೀನುಗಾರಿಕೆಯ ಬಂದರಾಗಿ ಸಹ ಉತ್ತಮವಾಗಿ ನಿರ್ವಹಿಸಬಹುದು.

ಪೋರ್ಟ್ ಟ್ರಸ್ಟ್ ಅಡಿಯಲ್ಲಿನ ಹಳೇ ಮಂಗಳೂರು ಬಂದರನ್ನು ಭಾರತ ಸರ್ಕಾರಕ್ಕೆ ವರ್ಗಾಯಿಸಿದರೆ, ಮೀನುಗಾರರ ಮೇಲೆ ಹೆಚ್ಚು ಪ್ರಮಾಣದ ಹಡಗುಕಟ್ಟೆ ಬಾಡಿಗೆಯನ್ನು ಮತ್ತು ಇತರ ಚಾರ್ಜುಗಳನ್ನು ವಿಧಿಸುವ ಸಂಭವವಿದ್ದು, ತತ್ಪರಿಣಾಮವಾಗಿ ಆ ಬಂದರಿನಲ್ಲಿ ಯಾಂತ್ರೀಕೃತ ಮೀನು ಹಿಡಿಯುವ ಕೆಲಸದ ಪ್ರಗತಿಗೆ ಇದು ಪ್ರತಿಕೂಲ ಪರಿಣಾಮವನ್ನುಂಟುಮಾಡಬಹುದು. ಹಳೇ ಮಂಗಳೂರು ಬಂದರನ್ನು ಭಾರತ ಸರ್ಕಾರ ವಹಿಸಿಕೊಳ್ಳುವುದರ ಪರಿಣಾಮವಾಗಿ ಪ್ರಸ್ತುತ ಬೆಂಗರೆಯಲ್ಲಿ (ಹಳೇ ಮಂಗಳೂರು ಬಂದರಿನ ಎದುರಿಗೆ) ವಾಸಿಸುತ್ತಿರುವ ಮೀನುಗಾರರನ್ನು ಇಲಾಖೆಗೆ ವರ್ಗಾಯಿಸಿ, ಬೆಂಗರೆಯ ಇಡೀ ಪ್ರದೇಶವನ್ನು ಮೀನು ಸಂಸ್ಕರಣಾ ಸಂಕೀರ್ಣವಾಗಿ ಅಭಿವೃದ್ಧಿಪಡಿಸಬಹುದು. ಈ ದೃಷ್ಟಿಯಿಂದ ಬೆಂಗರೆ ಒಂದು ಆದರ್ಶಪ್ರಾಯ ಸ್ಥಳವಾಗಿದೆ.

ಹಳೇ ಮಂಗಳೂರು ಬಂದರನ್ನು ಬಂದರುಗಳು ಹಾಗೂ ಒಳನಾಡು ಜಲಸಾರಿಗೆ ಇಲಾಖೆಗೆ ವರ್ಗಾಯಿಸಿದರೆ, ಈ ಕೇಂದ್ರವನ್ನು, ಮುಂದಿನ ದಿನಗಳಲ್ಲಿ ಕೇಂದ್ರದ ನೆರವನ್ನು ಪಡೆದು ಮಲ್ಪೆ ಬಂದರಿನ ರೀತಿ ಒಂದು ಪ್ರಮುಖ ಸರ್ವ ಋತು ಮೀನುಗಾರಿಕೆ ಬಂದರನ್ನಾಗಿ ಅಭಿವೃದ್ಧಿಪಡಿಸಬಹುದು ಮತ್ತು ಅಭಿವೃದ್ಧಿಯ ಎರಡನೇ ಹಂತವನ್ನು ಎಂದರೆ, ಒಡ್ಡು ಸೌಲಭ್ಯದೊಂದಿಗೆ ಮರಳ ದಿಬ್ಬವನ್ನು ಮತ್ತು ನದೀ ಮುಖವನ್ನು ಆಳಗೊಳಿಸುವ ಕಾರ್ಯವನ್ನು ಕಾಲಕ್ರಮದಲ್ಲಿ ಕೈಗೆತ್ತಿಕೊಳ್ಳಬಹುದು. ಮಂಗಳೂರು ಪೋರ್ಟ್ ಟ್ರಸ್ಟ್ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು ಅದು ಮೂಲತಃ ವಾಣಿಜ್ಯ ಬಂದರಿನ ಅಭಿವೃದ್ಧಿ ಹಾಗೂ ನಿರ್ಮಲೀಕರಣದಲ್ಲಿ ಆಸಕ್ತಿಯನ್ನು ಹೊಂದಿತ್ತು ಮತ್ತು ಅದು ಮಧ್ಯಮದ ಅಭಿವೃದ್ಧಿಯನ್ನು ಕೈಗೊಳ್ಳುವ ಸಂಬಂಧದಲ್ಲಿ ಉತ್ಸಾಹ ತೋರದಿದ್ದಿರಬಹುದು. ಅದರ ಈಗಿರುವ ವ್ಯವಸ್ಥೆಯಲ್ಲಿ ಆ ಬಂದರನ್ನು ನಡೆಸುವುದು ಲಾಭದಾಯಕವಲ್ಲ. ಮಂಗಳೂರು ಪೋರ್ಟ್ ಟ್ರಸ್ಟ್ ನಿಧಿ ಮತ್ತು ಮಂಗಳೂರು ಬಂದರು ನಿಧಿಯ ಆರ್ಥಿಕ ಸ್ಥಿತಿ ದುರ್ಬರವಾಗಿದ್ದು, ಇನ್ನುಮುಂದೆ ಬಂದರಿನ ನಿರ್ಮಲೀಕರಣ ಹಾಗೂ ಆಡಳಿತ ನಡೆಸುವುದು ಅಸಾಧ್ಯವಾಗಿದೆ.

ಆದ್ದರಿಂದ, ಮಂಗಳೂರು ಪೋರ್ಟ್ ಟ್ರಸ್ಟ್ ಅಧಿನಿಯಮ, 1953ನ್ನು ನಿರಸನಗೊಳಿಸುವ ಮೂಲಕ, ಮಂಗಳೂರು ಬಂದರಿನ ಆಡಳಿತವನ್ನು ರಾಜ್ಯದಲ್ಲಿರುವ ಇತರ ಚಿಕ್ಕ ಬಂದರುಗಳೊಂದಿಗೆ ಆಡಳಿತ ನೋಡಿಕೊಳ್ಳಲು ಕರ್ನಾಟಕದ ಬಂದರುಗಳು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲು ಉದ್ದೇಶಿಸಲಾಗಿದೆ.

ವಿಷಯವು ಬಹಳ ತುರ್ತು ಸ್ವರೂಪದ್ದಾಗಿದ್ದುದರಿಂದ ಒಂದು ಅಧ್ಯಾದೇಶವನ್ನು ಹೊರಡಿಸಲಾಯಿತು. ಸದರಿ ಆಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಿದೆ.

(ದಿನಾಂಕ 5ನೇ ಮಾರ್ಚ್ 1980ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV- 2 ಎ ಯಲ್ಲಿ ಸಂಖ್ಯೆ 166 ಎಂದು 5 ರಿಂದ 7ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿದೆ.)

**III**

**2025ರ ಅಧಿನಿಯಮ ಸಂಖ್ಯೆ: 46** ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961(1961ರ ಕರ್ನಾಟಕ ಅಧಿನಿಯಮ 20)ಕ್ಕೆ ಈ ಮುಂದಿನವುಗಳಿಗಾಗಿ ಉಪಬಂಧಗಳನ್ನು ರಚಿಸಲು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ನಿಯಮಗಳಲ್ಲಿ ನಿಯಮಿಸಬಹುದಾದಂಥ ಮಧ್ಯಂತರ ಅವಧಿಯಲ್ಲಿ ಹಡಗಿಗೆ ತುಂಬಿದ ಸರಕುಗಳ ಮೇಲಿನ ಫೀಜುಗಳನ್ನು ಪರಿಷ್ಕರಿಸುವುದು; ಮತ್ತು

(ii) ಅವಧಿಯೊಳಗೆ ಫೀಜುಗಳನ್ನು ಪರಿಷ್ಕರಿಸದಿದ್ದರೆ, ಸರ್ಕಾರವು ಅಧಿಸೂಚನೆ ಮೂಲಕ ಶೇಕಡವಾರು ಫೀಜುಗಳನ್ನು ಹೆಚ್ಚಿಸುವುದು ಮತ್ತು ಕಡಿಮೆ ಮಾಡುವುದು.

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 50, ಕಡತ ಸಂಖ್ಯೆ:ಸಂವ್ಯಶಾಇ 64 ಶಾಸನ 2025]
[ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 31ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:550, ದಿನಾಂಕ:09.09.2025 ರಲ್ಲಿ ಪ್ರಕಟಗೊಂಡಿದೆ]

**1961ರ '[ಕರ್ನಾಟಕ]' ಅಧಿನಿಯಮ ಸಂಖ್ಯೆ 20**

(1961ರ ಸೆಪ್ಟೆಂಬರ್ ಇಪ್ಪತ್ತೆಂಟನೇ ದಿನದಂದು (ಕರ್ನಾಟಕ ರಾಜ್ಯಪತ್ರ) ದಲ್ಲಿ ಮೊದಲು ಪ್ರಕಟವಾಗಿದೆ.)

## [1](ಕರ್ನಾಟಕ)[1] ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961

(1961ರ ಸೆಪ್ಟೆಂಬರ್ ಇಪ್ಪತ್ತೊಂದನೇ ದಿನದಂದು ರಾಷ್ಟ್ರಪತಿಯವರ ಅನುಮೋದನೆಯನ್ನು ಪಡೆದಿದೆ.)

(1980ರ ಅಧಿನಿಯಮ 8 ಮತ್ತು 2025ರ 46 ರ ಮೂಲಕ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯ][1]'ದ ಬಂದರುಗಳೊಳಗೆ ಸರಕನ್ನು ಹಡಗಿನಿಂದ ಇಳಿಸುವುದು, ಹಡಗಿಗೆ ತುಂಬುವುದು ಮತ್ತು ಸರಕು ದಾಸ್ತಾನು ಮಾಡುವುದು ಹಾಗೂ ಪ್ರಯಾಣಿಕರು ಹಡಗನ್ನು ಹತ್ತುವುದು ಮತ್ತು ಅದರಿಂದ ಇಳಿಯುವುದು - ಇವುಗಳ ಮೇಲೆ ಫೀಜುಗಳನ್ನು ವಿಧಿಸುವುದಕ್ಕಾಗಿ ಮತ್ತು ಕೆಲವು ಇತರ ಉದ್ದೇಶಗಳಿಗಾಗಿ ಉಪಬಂಧಿಸುವ ಅಧಿನಿಯಮ,

[1][ಕರ್ನಾಟಕ ರಾಜ್ಯ][1]'ದ ಬಂದರುಗಳೊಳಗೆ ಸರಕನ್ನು ಹಡಗಿನಿಂದ ಇಳಿಸುವುದು, ಅವುಗಳನ್ನು ಹಡಗಿಗೆ ತುಂಬುವುದು ಮತ್ತು ಸರಕು ದಾಸ್ತಾನು ಮಾಡುವುದು ಹಾಗೂ ಪ್ರಯಾಣಿಕರು ಹಡಗನ್ನು ಹತ್ತುವುದು ಮತ್ತು ಅದರಿಂದ ಇಳಿಯುವುದು - ಇವುಗಳ ಮೇಲೆ ಫೀಜುಗಳನ್ನು ವಿಧಿಸುವುದಕ್ಕಾಗಿ ಮತ್ತು ಕೆಲವು ಇತರ ಉದ್ದೇಶಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ [ಕರ್ನಾಟಕ ರಾಜ್ಯ)' ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು [1][ಕರ್ನಾಟಕ ರಾಜ್ಯ][1] ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1]'ಕ್ಕೆ ವ್ಯಾಪ್ತವಾಗತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು.

**1. ಅಧಿನಿಯಮವು ಅಧಿಸೂಚನೆಯ ಮೂಲಕ 15.7.1964ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.**

(4) ಇದು1 [XXXX]1 [2][ಕರ್ನಾಟಕ ರಾಜ್ಯ][2] ದ ಇತರ ಎಲ್ಲಾ ಬಂದರುಗಳಿಗೆ ಅನ್ವಯವಾಗತಕ್ಕದ್ದು.

1. 1980ರ ಅಧಿನಿಯಮ 8ರ ಮೂಲಕ 1.1.1980ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಹೊಡೆದುಕೊಂಡು ಬಂದದ್ದು" ಎನ್ನುವುದು, ಅದು ಯಾರೇ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿರಲಿ ಅಥವಾ ಇಲ್ಲದಿರಲಿ, ಮರಮುಟ್ಟು ಅಥವಾ ಇತರ ತೇಲುವ ವಸ್ತುವನ್ನು ಒಳಗೊಳ್ಳುತ್ತದೆ;

(ಬಿ) "ಸರಕುಗಳು" ಎಂಬುದು ಪ್ರತಿಯೊಂದು ವಿವರಣೆಯ ಜಿನಸುಗಳು ಮತ್ತು ವ್ಯಾಪಾರಿ ಸರಕು ಮತ್ತು ವಾಹನಗಳು, ಪಶುಗಳು, ಮೂಟೆಗಳು ಮತ್ತು ಇತರ ವಸ್ತುಗಳನ್ನು ಸಹ ಒಳಗೊಳ್ಳುತ್ತದೆ;

(ಸಿ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಒಂದು ಅಧಿಸೂಚನೆ;

(ಡಿ) ಸರಕುಗಳು ಅಥವಾ ಹೊಡೆದುಕೊಂಡು ಬಂದವುಗಳಿಗೆ ಸಂಬಂಧಪಟ್ಟಂತೆ ಬಳಸಿದಾಗ "ಒಡೆಯ" ಎಂಬುದು ಅಂಥ ಸರಕು ಅಥವಾ ಹೊಡೆದುಕೊಂಡು ಬಂದಿರುವುದರ ಮಾರಾಟ, ಅಭಿರಕ್ಷೆ, ಹಡಗಿನಿಂದ ಇಳಿಸುವುದು ಅಥವಾ ಹಡಗಿಗೆ ತುಂಬುವುದರ ಸಂಬಂಧದಲ್ಲಿ ಯಾರೇ ಸರಕು ರವಾನೆಗಾರ, ಸರಕು ಪಡೆಯುವವ, ಹಡಗು ಸಾಗಣೆ ವ್ಯಾಪಾರಿ ಅಥವಾ ಏಜೆಂಟನನ್ನು ಒಳಗೊಳ್ಳುತ್ತದೆ;

(ಇ) "ಪ್ರಯಾಣಿಕ" ಎಂದರೆ ವ್ಯಾಪಾರ ಹಡಗಿನ ನಾಯಕ ಮತ್ತು ನಾವಿಕರ ತಂಡ ಮತ್ತು ಒಡೆಯ, ಅವನ ಕುಟುಂಬವನ್ನು ಮತ್ತು ಅವನ ನೌಕರರನ್ನು ಹೊರತುಪಡಿಸಿ, ನೌಕೆಯಲ್ಲಿ ಒಯ್ಯಲಾಗುವ ಮೂರು ವರ್ಷಗಳಿಗಿಂತ ಕಡಿಮೆ ವಯಸ್ಸಿನವನಲ್ಲದ ಯಾರೇ ವ್ಯಕ್ತಿ:

(ಎಫ್) "ಬಂದರು" ಎಂದರೆ ಮುಖ್ಯ ಬಂದರನ್ನು ಹೊರತುಪಡಿಸಿ, ಭಾರತ ಬಂದರುಗಳ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ xv) ಎಲ್ಲಾ ಉಪಬಂಧಗಳು ಅಥವಾ ಯಾವುದೇ ಉಪಬಂಧವು ತತ್ಕಾಲದಲ್ಲಿ ಅನ್ವಯವಾಗಬಹುದಾದ ಬಂದರಿನ ಪರಿಮಿತಿಗಳೊಳಗೆ ಒಳಗೊಂಡ ಪ್ರದೇಶ;

(ಜಿ) ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಚ್) "ನೌಕೆ" ಎಂಬುದು ಮನುಷ್ಯರನ್ನು ಅಥವಾ ಸ್ವತ್ತನ್ನು ಮುಖ್ಯವಾಗಿ ಜಲ ಮಾರ್ಗದ ಯಾನದ ಮೂಲಕ ಒಯ್ಯುವ ಯಾವುದೇ ವಸ್ತುವನ್ನು ಒಳಗೊಳ್ಳುತ್ತದೆ.

**3. ಹಡಗಿನ ಮೂಲಕ ಸಾಗಿಸಿದ ಸರಕುಗಳ ಮೇಲೆ ಫೀಜುಗಳನ್ನು ವಿಧಿಸುವುದು,ಇತ್ಯಾದಿ.-** (1) [1][ಕರ್ನಾಟಕ ರಾಜ್ಯ][1]ದಲ್ಲಿ ನಿಯಮಿಸಬಹುದಾದ [2][ಅಂಥ ದರಗಳಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಫೀಜುಗಳನ್ನು ][2] [3][ಮತ್ತು ಅಂಥ ಸಮಯದ ಮಧ್ಯಂತರ ಅವಧಿಗಳಲ್ಲಿ ಫೀಜುಗಳನ್ನು ಪರಿಷ್ಕರಿಸಲು][3],-

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

2. 1980ರ ಅಧಿನಿಯಮ 8ರ ಮೂಲಕ 1.1.1980ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2025ರ ಅಧಿನಿಯಮ 46ರ ಮೂಲಕ ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ಯಾವುದೇ ಬಂದರಿನಲ್ಲಿ ಹಡಗುಗಳನ್ನು ಹತ್ತುವ ಮತ್ತು ಅದರಿಂದ ಇಳಿಯುವ ಎಲ್ಲಾ ಪ್ರಯಾಣಿಕರು;

(ಬಿ) ಯಾವುದೇ ಬಂದರಿನ ಪರಿಮಿತಿಗಳೊಳಗೆ ತಂಗಿರುವ ಅಥವಾ ಇರುವ ಯಾವುದೇ ನೌಕೆಯಿಂದ ಇಳಿಸಿದ ಅಥವಾ ಅದಕ್ಕೆ ತುಂಬಿದ ಸರಕುಗಳು;

(ಸಿ) ಯಾವುದೇ ಬಂದರಿನ ಪರಿಮಿತಿಗಳೊಳಗೆ ಆ ಉದ್ದೇಶಕ್ಕಾಗಿ ಒದಗಿಸಿರುವ ಯಾವುದೇ ಸ್ಥಳದಲ್ಲಿ ದಾಸ್ತಾನು ಮಾಡಿರುವ ಸರಕುಗಳು; ಮತ್ತು

(ಡಿ) ಯಾವುದೇ ಬಂದರಿನ ಪರಿಮಿತಿಗಳೊಳಗೆ ಅದಕ್ಕೆ ಅಥವಾ ಅದರಿಂದ ಸರಕುಗಳನ್ನು ತರುವ ಅಥವಾ ಸ್ಥಳಾಂತರಿಸುವ ಅಥವಾ ಬಾಡಿಗೆಗಾಗಿ ಓಡಾಡುವ ಪಶುಗಳು ಮತ್ತು ವಾಹನಗಳು;

[1][(ಇ) ಯಾವುದೇ ಬಂದರಿನ ರೇವಿನಲ್ಲಿ ಪ್ರಯಾಣಿಕರು ಅಥವಾ ಸರಕುಗಳನ್ನು ನೌಕೆಗಳಿಂದ ನೌಕೆಗಳಿಗೆ ಬದಲಾಯಿಸುವುದು;

(ಎಫ್) ಯಾವುದೇ ಬಂದರಿನಲ್ಲಿ ಅಂಥ ನೌಕೆಯಿಂದ ಅಥವಾ ನೌಕೆಗೆ, ಯಾವುದೇ ಹಡಗುಕಟ್ಟೆಯಿಂದ, ಬಂದರು ಕಟ್ಟೆಯಿಂದ, ಹಡಗು ಇಳಿದಾಣದಿಂದ, ಹಡಗು ದಕ್ಕೆಯಿಂದ, ಭೂಮಿಯಿಂದ, ಕಟ್ಟಡದಿಂದ ಅಥವಾ ಸ್ಥಳದಿಂದ ಯಾವುದೇ ಹಡಗು ಕಟ್ಟೆಗೆ, ಬಂದರು ಕಟ್ಟೆಗೆ, ಹಡಗು ಇಳಿದಾಣಕ್ಕೆ, ಹಡಗು ದಕ್ಕೆಗೆ, ಭೂಮಿಗೆ, ಕಟ್ಟಡಕ್ಕೆ ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಇಳಿಸುವುದು ಅಥವಾ ತುಂಬುವುದು;

(ಜಿ) ಅಂಥ ಯಾವುದೇ ಸ್ಥಳದ ಮೇಲಿನ ಸರಕುಗಳ ಕ್ರೇನು ಬಾಡಿಗೆ ಅಥವಾ ಹೊರುವ ಮಜೂರಿ;

(ಹೆಚ್) (i), ನೌಕೆಗಳ ಅಥವಾ ದೋಣಿಗಳ ಮೂಲಕ, ಮೇಲೆ ಹೇಳಲಾದಂತೆ, ಯಾವುದೇ ಲಂಗರುಗಳು, ಹಡಗುಕಟ್ಟೆ, ಬಂದರುಕಟ್ಟೆ, ಹಡಗು ಇಳಿದಾಣ, ಹಡಗುದಕ್ಕೆ, ಭೂಮಿ, ಕಟ್ಟಡ ಅಥವಾ ಸ್ಥಳದಲ್ಲಿ ಅಥವಾ ಅದರ ಪಕ್ಕಪಕ್ಕದಲ್ಲಿ ಸಂಪರ್ಕ ಕಲ್ಪಿಸುವ ಅಥವಾ ಇರುವ;

(ii) ಪ್ರಯಾಣಿಕರು ಅಥವಾ ಸರಕುಗಳನ್ನು ಒಯ್ಯುವ ಪ್ರಾಣಿಗಳು ಅಥವಾ ವಾಹನಗಳು, ಮೇಲೆ ಹೇಳಲಾದಂತೆ ಯಾವುದೇ ಹಡಗುಕಟ್ಟೆ, ಬಂದರುಕಟ್ಟೆ, ಹಡಗು ಇಳಿದಾಣ, ಹಡಗು ದಕ್ಕೆ, ಭೂಮಿ, ಕಟ್ಟಡ ಅಥವಾ ಸ್ಥಳದಲ್ಲಿ ಅಥವಾ ಅವುಗಳ ಮೇಲೆ ಬಾಡಿಗೆಗಾಗಿ ಪ್ರವೇಶಿಸುವ ಅಥವಾ ಓಡಿಸುವ ;

(iii) ಆಮದು ಮಾಡಿಕೊಳ್ಳಲಾದ ಅಥವಾ ರಫ್ತು ಮಾಡಲು ಉದ್ದೇಶಿಸಲಾದ ಸರಕುಗಳ ಒಡೆಯನ್ನು ಅಥವಾ ಸ್ಟೀಮರಿನ ಏಜೆಂಟನು ಯಾವುದೇ ಬಂದರಿನಲ್ಲಿ ಭೂಮಿ ಅಥವಾ ಷೆಡ್ಡುಗಳನ್ನು ಗುತ್ತಿಗೆಗೆ ಕೊಡುವ;

(iv) ಯಾವುದೇ ಬಂದರಿನಲ್ಲಿನ ಯಾವುದೇ ಭೂಮಿ, ಕಾಮಗಾರಿಗಳು ಅಥವಾ ಸಾಧನ ಸಾಮಗ್ರಿಗಳ ಯಾವುದೇ ಇತರ ಬಳಕೆಯ

-        ಉದ್ದೇಶಕ್ಕಾಗಿ ಬಳಸಿಕೊಳ್ಳಲಾದ ಯಾವುದೇ ಬಂದರಿನಲ್ಲಿನ ಯಾವುದೇ ಸ್ವತ್ತು ಅಥವಾ ಸ್ಥಳ;
(ಐ) ಯಾವದೇ ಬಂದರಿನಲ್ಲಿ ನೌಕೆಗಳು, ಪ್ರಯಾಣಿಕರು ಅಥವಾ ಸರಕುಗಳ ಸಂಬಂಧದಲ್ಲಿ ಯಾವುದೇ ಇತರ ಸೇವೆ][1]

-[2][ಇವುಗಳ ಮೇಲೆ][2] ವಿಧಿಸತಕ್ಕದ್ದು;

1. 1980 ಅಧಿನಿಯಮ 8ರ ಮೂಲಕ 01.01.1980 ರಿಂದ ಜಾರಿಗೆ ಬರುವಂತೆ (ಇ) ಯಿಂದ (ಐ) ವರೆಗಿನ ಖಂಡಗಳನ್ನು ಸೇರಿಸಿಲಾಗಿದೆ.
2. 1980 ಅಧಿನಿಯಮ 8ರ ಮೂಲಕ 1.1.1980 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ರಾಜ್ಯ ಸರ್ಕಾರವು ಯಾವುದೇ ವರ್ಗದ ಸರಕುಗಳು, ಪ್ರಯಾಣಿಕರು, ನೌಕೆಗಳು, ಪಶುಗಳು ಅಥವಾ ವಾಹನಗಳು ಅಧಿಸೂಚನೆಯ ಮೂಲಕ ಈ ಪ್ರಕರಣದ ಮೇರೆಗೆ ಯಾವ ಫೀಜಿಗೆ ಅವು ಗುರಿಯಾಗಬಹುದೋ ಆ ಯಾವುದೇ ಫೀಜಿನಿಂದ, ಪೂರ್ಣವಾಗಿ ಅಥವಾ ಭಾಗಶ: ವಿನಾಯಿತಿಗೊಳಿಸಬಹುದು:

[1][ಮತ್ತೂ ಪರಂತು, ಮಂಗಳೂರು ಬಂಧರಿಗಾಗಿ ಬೇರೆ ಬೇರೆ ಫೀಜಿಗಳು ಮತ್ತು ಬೇರೆ ಬೇರೆ ಷರತ್ತುಗಳನ್ನು ನಿಯಮಿಸಬಹುದು.][1]

[ಅಲ್ಲದೆ ಪರಂತು ನಿಯಮಿಸಬಹುದಾದಂಥ ಸಮಯದ ಮಧ್ಯಂತರ ಅವಧಿಯಲ್ಲಿ ಫೀಜುಗಳನ್ನು ಪರಿಷ್ಕರಿಸದಿದ್ದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಹಣದುಬ್ಬರ ಮತ್ತು ಇತರ ಷರತ್ತುಗಳನ್ನು ಪರಿಗಣಿಸಿ ಅಂಥ ಶೇಕಡವಾರು ಫೀಜುಗಳನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದು.]

1. 1980ರ ಅಧಿನಿಯಮ 8 ಮೂಲಕ 1.1.1980 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2025ರ ಅಧಿನಿಯಮ 46ರ ಮೂಲಕ ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2.) (1) ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಫೀಜಿನ ಸಂದಾಯದಿಂದ ತಪ್ಪಿಸಿಕೊಳ್ಳುವ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸುವ ಯಾರೇ ವ್ಯಕ್ತಿಯು ನಿಯಮಿಸಬಹುದಾದಂತೆ ಸಂದಾಯ ಮಾಡಬೇಕಾದ ಫೀಜಿನ 2ರಷ್ಟನ್ನು ಮೀರದಂತಹ ದಂಡವನ್ನು ಸಂದಾಯಮಾಡಲು ಬದ್ಧನಾಗಿರತಕ್ಕದ್ದು.

(3) (1) ಮತ್ತು (2) ನೇ ಉಪಪ್ರಕರಣಗಳ ಮೇರೆಗೆ ನಿಯಮಿಸಿದ ಫೀಜುಗಳು ಮತ್ತು ದಂಡಗಳಮನ್ನು ಯಾವುದೇ ಬಂದರಿನೊಳಗೆ ಕಾನೂನು ಬದ್ಧವಾಗಿ ವಿಧಿಸಿದ ಎಲ್ಲಾ ದಾರಿ ಸುಂಕಗಳು ಅಥವಾ ಚಾರ್ಜುಗಳ ಜೊತೆಗೆ ಸಂದಾಯ ಮಾಡತಕ್ಕದ್ದು.

4. **ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸಬೇಕಾಗಿರುವ ಮತ್ತು ನೆರವೇರಿಸಬೇಕಾಗಿರುವ ವ್ಯಕ್ತಿಗಳು ,-** ಈ ಅಧಿನಿಯಮದ ಮೇರೆಗಿನ ಫೀಜುಗಳು ಮತ್ತು ದಂಡಗಳ ವಿಧಿಸುವಿಕೆಯನ್ನು ಈ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದ ಅಂತಹ ಅಧಿಕಾರಿಗಳು ಮತ್ತು ಅಂತಹ ವ್ಯಕ್ತಿಗಳು ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಮೂಲಕ

ಪ್ರದಾನ ಮಾಡಿದ ಮತ್ತು ವಿಧಿಸಿದ ಇತರ ಎಲ್ಲಾ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಅವರು ಚಲಾಯಿಸತಕ್ಕದ್ದು ಮತ್ತು ನೇರವೇರಿಸತಕ್ಕದ್ದು,

**5. ಫೀಜಗಳನ್ನು ಸಂದಾಯ ಮಾಡುವವರೆಗೆ ಸರಕುಗಳನ್ನು ತಡೆಹಿಡಿದಿಡುವುದು.-** (1) ಈ ಅಧಿನಿಯಮದ ಮೇರೆಗೆ ಫೀಜುಗಳು ಮತ್ತು ದಂಡಗಳನ್ನು ವಿಧಿಸುವ ಕರ್ಕವ್ಯವನ್ನು ಹೊಂದಿರಬಹುದಾದ ಅಧಿಕಾರಿಗಳು ಮತ್ತು ವ್ಯಕ್ತಿಗಳು, ಕಾನೂನುಬದ್ಧ ಫೀಜುಗಳು ಮತ್ತು ದಂಡಗಳನ್ನು ಸಂದಾಯ ಮಾಡುವವರೆಗೆ ಸರಕುಗಳನ್ನು ತಡೆಹಿಡಿದಿಟ್ಟುಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು,

(2) ಸರಕುಗಳನ್ನು ಹಾಗೆ ತಡೆಹಿಡಿದಿಟ್ಟುಕೊಂಡಿರುವಾಗ ಆ ಸರಕುಗಳನ್ನು ಅಧಿಕಾರಿಯು, ಒಡೆಯನ ಅಥವಾ ಸರಕು ಪಡೆಯುವವನ, ವಿಳಾಸವು ತಿಳಿದಿದ್ದರೆ, ಅಂಥ ಸರಕುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜುಗಳು, ದಂಡಗಳು ಮತ್ತು ಚಾರ್ಜುಗಳ ಮೊಬಲಗನ್ನು ನಿರೂಪಿಸಿ ಅವನಿಗೆ ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು, ಬಾಕಿಯಾದ ಮೊಬಲಗನ್ನು ಒಡೆಯ ಅಥವಾ ಸರಕು ಪಡೆಯುವವನು ಅಂಥ ಮೊಬಲಗನ್ನು ಸಂದಾಯ ಮಾಡಬೇಕಾಗಿದ್ದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಅಥವಾ ನೋಟೀಸಿನ ದಿನಾಂಕದಿಂದ ಹದಿನಾಲ್ಕು ದಿವಸಗಳೊಳಗೆ ಇವುಗಳಲ್ಲಿ ಯಾವುದು ತರುವಾಯದ್ದೋ ಅದರೊಳಗೆ ಸಂದಾಯ ಮಾಡದಿದ್ದರೆ, ಸದರಿ ಸರಕುಗಳನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡುವುದು ಅಥವಾ ಮಾರಾಟ ಮಾಡಿಸುವುದು ಮತ್ತು ಹಾಗೆ ತಡೆಹಿಡಿದಿರುವುದರ ಮತ್ತು ಮಾರಾಟದ ವೆಚ್ಚಗಳನ್ನು ಮತ್ತು ಆ ಫೀಜುಗಳು ಮತ್ತು ದಂಡಗಳ ಮೊಬಲಗಿನ ಎರಡರಷ್ಟನ್ನು ಜುಲ್ಮಾನೆಯ ರೂಪದಲ್ಲಿ ಸಂದಾಯ ಮಾಡಿದ ತರುವಾಯ, ಆ ಮಾರಾಟದ ಉತ್ಪತ್ತಿಗಳ ಯಾವುದೇ ಹೆಚ್ಚುವರಿ ಇದ್ದರೆ, ಅದನ್ನು, ಆ ಮಾರಾಟದ ದಿನಾಂಕದಿಂದ ಆರು ತಿಂಗಳುಗಳೊಳಗೆ ಕ್ಲೇಮು ಮಾಡಿದರೆ ಒಡೆಯನಿಗೆ ಅಥವಾ ಸರಕು ಪಡೆಯುವವನಿಗೆ ಅಥವಾ ಅದಕ್ಕೆ ಹಕ್ಕುಳ್ಳವನಾದ ಇತರ ವ್ಯಕ್ತಿಗೆ ಸಂದಾಯ ಮಾಡುವುದು ಸರ್ಕಾರದ ಅಂಥ ಅಧಿಕಾರಿಗೆ ಕಾನೂನು ಸಮ್ಮತವಾಗಿರತಕ್ಕದ್ದು:

ಪರಂತು, ಸರಕುಗಳು ಕೆಟ್ಟು ಹೋಗುವ ಸ್ವರೂಪದ್ದಾಗಿದ್ದರೆ, ನಿಯಮಿಸಬಹುದಾದ, ಆದರೆ ಅಂಥ ಫೀಜುಗಳನ್ನು ಸಂದಾಯ ಮಾಡಬೇಕಾದ ಅವಧಿಯ ತರುವಾಯದ ಇಪ್ಪತ್ತನಾಲ್ಕು ಗಂಟೆಗಳಿಗಿಂತ ಕಡಿಮೆ ಇಲ್ಲದ ಅಂಥ ಅವಧಿಯೊಳಗೆ ಅವುಗಳನ್ನು ಮಾರಾಟ ಮಾಡುವುದು ಅಥವಾ ಮಾರಾಟ ಮಾಡಿಸುವುದು ಆ ಅಧಿಕಾರಿಗೆ ಕಾನೂನು ಸಮ್ಮತವಾಗಿರತಕ್ಕದ್ದು,

**6. ಹಡಗಿನ ಇಳಿದಾಣ, ಇಳಿಕಟ್ಟೆ, ಮುಂತಾದವುಗಳಿಗೆ ಹಾನಿಯುಂಟು ಮಾಡಿದಾಗ ಒಡೆಯನ ಹೋಣೆಗಾರಿಕೆ,-** ಯಾವುದೇ ನೌಕೆ ಅಥವಾ ಹೊಡೆದುಕೊಂಡು ಬಂದಿದ್ದು, ಯಾವುದೇ ಹಡಗಿನ ಇಳಿದಾಣ, ಇಳಿಕಟ್ಟೆ, ಹಡಗುಕಟ್ಟೆ ಅಥವಾ ಬಂದರು ಕಟ್ಟೆಯನ್ನು ಮಲಿನಗೊಳಿಸಿದಲ್ಲಿ ಮತ್ತು ಅದಕ್ಕೆ ಹಾನಿಯನ್ನುಂಟು ಮಾಡಿದಲ್ಲಿ ನೌಕೆಯ ಒಡೆಯ ಅಥವಾ ನಾಯಕ ಅಥವಾ ಹೊಡೆದುಕೊಂಡು ಬಂದುದರ ಒಡೆಯ ಅಥವಾ ಯಾರೇ ವ್ಯಕ್ತಿಯು ಹಡಗು ಇಳಿಕಟ್ಟೆ, ಹಡಗು ಕಟ್ಟೆ ಅಥವಾ ಬಂದರು ಕಟ್ಟೆಗೆ ಹಾನಿಯನ್ನುಂಟು ಮಾಡಿರುವಲ್ಲಿ, ಅಂಥ ವ್ಯಕ್ತಿಯು ಉಂಟಾಗಿರುವ

ಹಾನಿಯ ಮೊಬಲಗಿಗೆ ಹೊಣೆಗಾರನಾಗಿರತಕ್ಕದ್ದು, ಅಂಥ ಮೊಬಲಗನ್ನು ನಿಯಮಿಸಿದ ರೀತಿಯಲ್ಲಿ ಖಚಿತಪಡಿಸಿಕೊಳ್ಳಬಹುದು ಮತ್ತು ಅದನ್ನು ಅಂಥ ನೌಕೆಯನ್ನು ಅಥವಾ ಹೊಡೆದುಕೊಂಡು ಬಂದಿದ್ದನ್ನು ಮತ್ತು ಅದರ ಮೇಲಿರುವ ಯಾವುದೇ ಸ್ವತ್ತನ್ನು ಸ್ವಾಧೀನಪಡಿಸುವ ಮತ್ತು ಮಾರಾಟ ಮಾಡುವ ಮೂಲಕ ಅಥವಾ ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ವಸೂಲು ಮಾಡಬಹುದು.

**7. ಈ ಅಧಿನಿಯಮದ ಮೇರೆಗೆ ಸ್ವೀಕರಿಸಿದ ಫೀಜುಗಳ ಪಟ್ಟಿ-** ಈ ಅಧಿನಿಯಮದ ಮೇರೆಗೆ ಸ್ವೀಕರಿಸಿದ ಎಲ್ಲಾ ಫೀಜುಗಳು ಮತ್ತು ಇತರ ಮೊಬಲಗುಗಳನ್ನು ಈ ಮುಂದಿನ ಉದ್ದೇಶಗಳಿಗಾಗಿ ವೆಚ್ಚ ಮಾಡಬಹುದು. ಎಂದರೆ:-

(ಎ) ಹಡಗು ಸರಕಿನ ದಾಸ್ತಾನು ಮತ್ತು ನಿರ್ವಹಣೆಗಾಗಿನ ಸೌಲಭ್ಯಗಳ ಸುಧಾರಣೆಗೆ ವ್ಯವಸ್ಥೆ :

(ಬಿ) ಪ್ರಯಾಣಿಕರ ಸೌಲಭ್ಯಗಳ ಸುಧಾರಣೆಗೆ ವ್ಯವಸ್ಥೆ :

(ಸಿ) ಈ ಅಧಿನಿಯಮದ ಆಡಳಿತಕ್ಕಾಗಿನ ವೆಚ್ಚಗಳ ಸಂದಾಯಕ್ಕೆ ವ್ಯವಸ್ಥೆ;

(ಡಿ) ಆ ಬಂದರಿನ ದಕ್ಷ ಕಾರ್ಯನಿರ್ವಹಣೆಗಾಗಿ ಸಾಮಾನ್ಯವಾಗಿ ಅತ್ಯವಶ್ಯಕವಾದಂಥ ಕಾಮಗಾರಿಗಳ ಮತ್ತು ಸೇವೆಗಳ ಬಾಬುಗಳು.

**8. ಬಂದರು ಫೀಜುಗಳ ನಿಧಿಯ ಲೆಕ್ಕ.-** (1) ಪ್ರತಿಯೊಂದು ಬಂದರಿಗಾಗಿ ಬಂದರು ಫೀಜುಗಳ ನಿಧಿ ಲೆಕ್ಕ ಎಂದು ಕರೆಯಲಾಗುವ ಒಂದು ಪ್ರತ್ಯೇಕವಾದ ಲೆಕ್ಕವಿರತಕ್ಕದ್ದು, ಅದರಲ್ಲಿ ಭಾರತ ಬಂದರುಗಳ ಅಧಿನಿಯಮ, (1908ರ ಕೇಂದ್ರ ಅಧಿನಿಯಮ XV) 36ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಬಂದರು ನಿಧಿ ಲೆಕ್ಕ ಮತ್ತು ಬಂದರಿನ ಸಾಮಾನ್ಯ ಲೆಕ್ಕವನ್ನು ವಿಲೀನಗೊಳಿಸತಕ್ಕದ್ದು. ಅಂಥ ಲೆಕ್ಕವನ್ನು ನಿಯಮಿಸಬಹುದಾದ ಅಂಥ ಪ್ರಾಧಿಕಾರವು ಮತ್ತು ಅಂಥ ರೀತಿಯಲ್ಲಿ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

2) ಬಂದರು ನಿಧಿ ಲೆಕ್ಕಕ್ಕೆ ಜಮೆಯಾಗಬೇಕಾದ ಈ ಅಧಿನಿಯಮದ ಮೇರೆಗೆ ಸ್ವೀಕರಿಸಿದ ಎಲ್ಲಾ ಹಣಗಳು ಮತ್ತು ಭಾರತ ಬಂದರುಗಳ ಅಧಿನಿಯಮ, 1908ರ ಮೇರೆಗೆ ಸ್ವೀಕರಿಸಿದ ಎಲ್ಲಾ ಹಣಗಳು ಮತ್ತು ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಅನ್ಯಥಾ ಯಾವುದೇ ಬಂದರಿನ ಲೆಕ್ಕದ ಬಗ್ಗೆ ಸ್ವೀಕರಿಸಿದ ಇತರ ಎಲ್ಲಾ ಹಣಗಳನ್ನು ಆ ಬಂದರಿನ ಬಂದರು ಫೀಜುಗಳ ನಿಧಿಯ ಲೆಕ್ಕಕ್ಕೆ ಜಮೆ ಮಾಡತಕ್ಕದ್ದು.

**9. ಬಂದರುಗಳನ್ನು ಗುಂಪುಗೂಡಿಸುವುದು.-** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, 8ನೇ ಪ್ರಕರಣದ ಉದ್ದೇಶಕ್ಕಾಗಿ ರಾಜ್ಯದಲ್ಲಿನ ಯಾವುದೇ ಸಂಖ್ಯೆಯ ಬಂದರುಗಳನ್ನು ಒಂದೇ ಬಂದರೆಂದು ರಚಿತವಾಗಿರುವುದಾಗಿ ತಿಳಿಯತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ 8ನೇ ಪ್ರಕರಣದ ಮೇರೆಗೆ ಬಂದರು ಫೀಜುಗಳ ನಿಧಿಗೆ ಜಮೆ ಮಾಡಬೇಕಾದ ಎಲ್ಲಾ ಹಣಗಳು [ಕರ್ನಾಟಕ ಬಂದರುಗಳ ನಿಧಿ ಲೆಕ್ಕ)' ಎಂದು ಕರೆಯಲಾಗುವ ಒಂದು ಸಾಮಾನ್ಯ ಬಂದರು ನಿಧಿ ಲೆಕ್ಕವಾಗತಕ್ಕದ್ದು. ಅದು ಯಾವುದೇ ಬಂದರಿಗಾಗಿ ವಹಿಸಿದ ಎಲ್ಲಾ ವೆಚ್ಚಗಳ ಸಂದಾಯಕ್ಕಾಗಿ ಲಭ್ಯವಾಗಿರತಕ್ಕದ್ದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(2) (1)ನೇ ಉಪಪ್ರಕರಣದ ಮೇರೆಗೆ ಬಂದರುಗಳನ್ನು ಗುಂಪುಗೂಡಿಸಿರುವಲ್ಲಿ ಈ ಮುಂದಿನ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ರಾಜ್ಯ ಸರ್ಕಾರವು, ಈ ಅಧಿನಿಯಮ ಮತ್ತು ಭಾರತ ಬಂದರುಗಳ ಅಧಿನಿಯಮ, 1908ರ ಮೂಲಕ ಗುಂಪಿನ ಹಲವಾರು ಬಂದರುಗಳಿಗಾಗಿ ನಿಧಿಯ ವೆಚ್ಚಕ್ಕೆ ಅಧಿಕೃತಗೊಳಿಸಲಾಗಿರುವ ಉದ್ದೇಶಗಳಿಗೆ ಆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬಹುದು; ಮತ್ತು

(ಬಿ) ರಾಜ್ಯ ಸರ್ಕಾರವು ಆ ಗುಂಪಿನಲ್ಲಿನ ಎಲ್ಲ ಬಂದರುಗಳ ಬಗ್ಗೆ ಸಾಮೂಹಿಕವಾಗಿ ಅಥವಾ ಅವುಗಳ ಪೈಕಿ ಯಾವುದೇ ಒಂದರ ಬಗ್ಗೆ ಪ್ರತ್ಯೇಕವಾಗಿ ಈ ಅಧಿನಿಯಮದ ಮೇರಗೆ ಮತ್ತು ಭಾರತ ಬಂದರುಗಳ ಅಧಿನಿಯಮ, 1908ರ 34ನೇ ಪ್ರಕರಣದ ಮೇರಗಿನ ಅಧಿಕಾರವನ್ನು ಚಲಾಯಿಸಬಹುದು.

**10. ನಿಯಮಗಳು,-** (1) ರಾಜ್ಯ ಸರ್ಕಾರವು [1][xxx][1] ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

1. 2025ರ ಅಧಿನಿಯಮ 46ರ ಮೂಲಕ ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ,-

(ಎ) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಹಡಗಿನಲ್ಲಿ ತುಂಬಲು ಉದ್ದೇಶಿಸಲಾದ ಅಥವಾ ಆ ಬಂದರೊಳಗಿನ ಹಡಗುಗಳಿಂದ ಇಳಿಸಿರುವ ಸರಕುಗಳು ಅಥವಾ ನಿರ್ದಿಷ್ಟ ವರ್ಗಗಳ ಸರಕುಗಳನ್ನು ಇಡಬೇಕಾಗಿರುವಂಥ ಸ್ಥಳಗಳು ಮತ್ತು ಪ್ರಯಾಣಿಕರು ಹಡಗು ಹತ್ತಬಹುದಾದ ಅಥವಾ ಅದರಿಂದ ಇಳಿಯಬಹುದಾದ ಸ್ಥಳಗಳನ್ನು ಗೊತ್ತುಪಡಿಸಿ;

(ಬಿ) 3ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ದಂಡಗಳನ್ನು ನಿಯಮಿಸಿ

(ಸಿ) ಅಂಥ ಫೀಜುಗಳನ್ನು ನಿರ್ಧರಿಸತಕ್ಕಂಥ ರೀತಿ ಮತ್ತು ಅವುಗಳನ್ನು ಸಂದಾಯ ಮಾಡಬೇಕಾದಂಥ ಕಾಲವನ್ನು ವಿನಿಯಮಿಸಿ;

(ಡಿ) ಯಾವುದೇ ಬಂದರಿನಲ್ಲಿ ಫೀಜುಗಳ ಕೋಷ್ಟಕವನ್ನು ಪ್ರದರ್ಶಿಸತಕ್ಕಂಥ ರೀತಿಗಾಗಿ ಉಪಬಂಧಿಸಿ;

(ಇ) ಯಾರೇ ವ್ಯಕ್ತಿಯ ಮೂಲಕ ಅಥವಾ ಯಾವುದೇ ನೌಕ ಅಥವಾ ಹೊಡೆದುಕೊಂಡು ಬಂದುದರ ಮೂಲಕ ಯಾವುದೇ ಬಂದರಿನಲ್ಲಿನ ಹಡಗು ಇಳಿದಾಣ, ಇಳಿಕಟ್ಟೆ, ಹಡಗುಕಟ್ಟೆ, ಅಥವಾ ಬಂದರು ಕಟ್ಟೆಗೆ

ಉಂಟಾಗಿರಬಹುದಾದ ಯಾವುದೇ ಹಾನಿಯ ಮೊಬಲಗನ್ನು ನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಅದರ ವಸೂಲಾತಿಗಾಗಿ ಉಪಬಂಧಿಸಿ;

(ಎಫ್) 4ನೇ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ಅಧಿಕಾರಿಗಳು ಮತ್ತು ವ್ಯಕ್ತಿಗಳು ಧರಿಸಬೇಕಾದ ಸಮವಸ್ತ್ರಗಳು ಅಥವಾ ಬಿಲ್ಲೆಗಳನ್ನು ನಿಯಮಿಸಿ;

(ಜಿ) ಬಂದರು ಪರಿಮಿತಿಗಳೊಳಗಿನ ಪ್ರತಿಯೊಂದು ಪ್ರದೇಶದ ಮೇಲಿನ, ಅದರಲ್ಲಿನ, ಅದರ ಸುತ್ತಮುತ್ತಲಿನ ಮತ್ತು ಅಲ್ಲಿಗೆ ಮತ್ತು ಅಲ್ಲಿಂದ ಸಂಚಾರದ ವ್ಯವಸ್ಥಾಪನೆಗಾಗಿ ಉಪಬಂಧಿಸಿ:

(ಹೆಚ್) ಬಂದರುಗಳ ಫೀಜುಗಳ ಲೆಕ್ಕ ಮತ್ತು [1] [ಕರ್ನಾಟಕ ಬಂದರುಗಳ ನಿಧಿ ಲೆಕ್ಕ][1] ಇವುಗಳ ಪ್ರಾಧಿಕಾರವನ್ನು ಮತ್ತು ಅವುಗಳ ನಿರ್ವಹಣೆಯ ರೀತಿಯನ್ನು ನಿಯಮಿಸಿ;

1. **ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(ಐ) ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವು, ಅದರ ಉಲ್ಲಂಘನೆಯು, ಅಪರಾಧ ನಿರ್ಣಯವಾದ ಮೇಲೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿಯುವಂಥದ್ದಾಗಿರುವಾಗ ಆ ಉಲ್ಲಂಘನೆ ಮುಂದುವರಿಯುವ ಕಾಲದಲ್ಲಿ ಮೊದಲನೆಯದರ ತರುವಾಯ ಪ್ರತಿ ದಿವಸಕ್ಕಾಗಿ ಐದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು ಎಂದು ಉಪಬಂಧಿಸಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿಅಡಕವಾಗಬಹುದಾದ ಮೂವತ್ತು ದಿವಸಗಳ ಒಟ್ಟು ಅವಧಿಗಾಗಿ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ಅದರ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಒಪ್ಪಿದರೆ ಅಥವಾ ಎರಡೂ ಸದನಗಳು ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯ ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**11. ಕಂಪನಿಗಳು, ಇತ್ಯಾದಿಗಳಿಂದ ಅಪರಾಧಗಳು -** (1) ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಆ ಕಂಪನಿಯು ಹಾಗೂ ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಆದರ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕೆ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಆ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸತಕ್ಕದ್ದು, ಮತ್ತು ತದನಂತರವಾಗಿ ಅವರ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿಕರಾಗತಕ್ಕದ್ದು,

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಶ್ರದ್ದೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಪ್ರಕರಣದ ಮೇರೆತ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಅಧಿಕಾರಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆ ಎಂದು ಅಥವಾ ಅಪರಾಧವನ್ನು ಅವರ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಮಾಡಲಾಯಿತೆಂದು ಹೇಳಬಹುದು ಎಂದು ರುಜುವಾತಾದಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಆ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) “ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ “ನಿರ್ದೇಶಕ" ಎಂದರೆ ಆ ಫರ್ಮಿನ ಪಾಲುದಾರ.

**12. ಅಧಿನಿಯಮದ ಪರಿಣಾಮ.-** ಈ ಅಧಿನಿಯಮದ ಉಪಬಂಧಗಳು, ಭಾರತ ಬಂದರುಗಳ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ XV) ಇದರ ಉಪಬಂಧಗಳಿಗೆ ಅಸಂಗತವಾದುದು ಏನೇ ಇದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕದ್ದು.

**13. ಅಧಿಕಾರಿಗಳು, ಮುಂತಾದವರ ರಕ್ಷಣೆ.-** (1) ಈ ಅಧಿನಿಯಮದ ಯಾವುದೇ ಉಪಬಂಧಗಳ ಮೇರೆಗ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಮೇರೆಗೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಲು ನೇಮಕಗೊಂಡ ಅಥವಾ ಅಧಿಕೃತಗೊಳಿಸಲಾದ ಎಲ್ಲಾ ಅಧಿಕಾರಿಗಳನ್ನು ಮತ್ತು ಎಲ್ಲಾ ವ್ಯಕ್ತಿಗಳನ್ನು ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ

ಯಾವುದೇ ನಿಯಮದ ಅಥವಾ ಆದೇಶದ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸಿರುವುದಾಗಿ ತಾತ್ಪರ್ಯವಾಗುವಾಗ ಭಾರತ ದಂಡಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರಾಗಿರುವುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಮೇರೆಗೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಲು ನೇಮಕಗೊಂಡ ಅಥವಾ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯ ಅಥವಾ ವ್ಯಕ್ತಿಯ ವಿರುದ್ಧ ಯಾವುದೇನಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಮೂಲಕ ಉಂಟಾದ ಯಾವುದೇ ಹಾನಿಗಾಗಿ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**14. ನಿರಸನ ಮತ್ತು ಉಳಿಸುವಿಕೆಗಳು ,-** ಹೊರ ಬಂಧರುಗಳ ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಸಳ ಅಧಿನಿಯಮ, 1885 ( ವದರಾಸು ಅಧಿನಿಯಮ, 1885ರ III) ಮತ್ತು ಮುಂಬಯಿ ಸರಕನ್ನು ಹಡಗಿನಿಂದ ಇಳಿಸುವ ಮತ್ತು ತುಂಬವ ಫೀಜುಗಳ ಅಧಿನಿಯಮ, 1882 (ಮುಂಬಯಿ ಅಧಿನಿಯಮ 1882ರ VII) – ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 (1899 [1][ಕರ್ನಾಟಕ][1] ಅಧಿನಿಯಮ III) ರ 6ನೇ ಪ್ರಕರಣವು, ಅಂಥ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಈ ಅಧಿನಿಯಮದ ಮೂಲಕ ಸದರಿ ಅಧಿನಿಯಮಗಳನ್ನು ನಿರಸಗೊಳಿಸಿದ್ದಿದ್ದರೆ ಮತ್ತು ಪುನರ್ ಅಧಿನಿಯಮಿಇಗೊಳಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**1.ಕರ್ನಾಟಕ ಕಾನೂನಿನ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

* * *

**ಅಧಿಸೂಚನೆ**

**ಬೆಂಗಳೂರು, ದಿನಾಂಕ 6 ನೇ ಜುಲೈ, 1964 [ಸಂಖ್ಯೆ ಪಿಡಬ್ಲ್ಯುಡಿ 75 ಸಿಎಸ್ಪಿ 61]**

ಎಸ್.ಓ.936,- ಮೈಸೂರು ಬಂಧರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961ರ (1916ರ ಮೈಸೂರು ಅಧಿನಿಯಮ ಸಂಖ್ಯೆ 20)[1] ನೇ

ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 15ನೇ ಜುಲೈ 1964ನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
ಎಂ.ವಿ.ಪಂಡಿತ್
ಉಪ ಕಾರ್ಯದರ್ಶಿ

(ದಿನಾಂಕ 9ನೇ ಜುಲೈ 1964ರ ಕರ್ನಾಟಕ ರಾಜ್ಯಪತ್ರ IV-2i, (ii) ಪ್ರಕಟಿಸಲಾಗಿದೆ.)

The above translation of the Karnataka Point (Landing and Shippin Fees ) Act 1961 (Karnataka Act 20 of 1961 ) shallbe authoritative text in the Kannda Language under section 5A of the Karnataka Offical Language Act, 1963 (Karnataka Act 26 of 1963)

GOVERNOR OF KARNATAKA
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ.ಕೆ. ಬೋರೇಗೌಡ
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಪಿ.ಆರ್. 97

## 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ:46

(2025 ರ ಸೆಪ್ಟೆಂಬರ್ ತಿಂಗಳ 09ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 09ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 20)ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಬಂದರುಗಳ (ಸರಕನ್ನು ಹಡಗಿನಿಂದ ಇಳಿಸುವ ಮತ್ತು ಹಡಗಿಗೆ ತುಂಬುವ ಫೀಜುಗಳು) ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 20)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 3ನೇ ಪ್ರಕರಣದ, (1)ನೇ ಉಪ-ಪ್ರಕರಣದಲ್ಲಿ,-

(i) “ಅಂಥ ದರಗಳಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಫೀಜುಗಳನ್ನು” ಎಂಬ ಪದಗಳ ತರುವಾಯ “ಮತ್ತು ಅಂಥ ಸಮಯದ ಮಧ್ಯಂತರ ಅವಧಿಗಳಲ್ಲಿ ಫೀಜುಗಳನ್ನು ಪರಿಷ್ಕರಿಸಲು” ಎಂಬ ಪದವನ್ನು ಸೇರಿಸತಕ್ಕದ್ದು;

(ii) ಎರಡನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

”ಅಲ್ಲದೆ ಪರಂತು ನಿಯಮಿಸಬಹುದಾದಂಥ ಸಮಯದ ಮಧ್ಯಂತರ ಅವಧಿಯಲ್ಲಿ ಫೀಜುಗಳನ್ನು ಪರಿಷ್ಕರಿಸದಿದ್ದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಹಣದುಬ್ಬರ ಮತ್ತು ಇತರ ಷರತ್ತುಗಳನ್ನು ಪರಿಗಣಿಸಿ ಅಂಥ ಶೇಕಡವಾರು ಫೀಜುಗಳನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದು”.

**3. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ, 10ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿ, “ಪೂರ್ವ ಪ್ರಕಟಣೆಯ ತರುವಾಯ” ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

The above translation of the Karnataka Ports (Landing and Shipping Fees)(Amendment) Act, 2025 (Karnataka Act 46 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.